**ನ್ಯಾಷನಲ್ ಟ್ರಸ್ಟ್ ಅಡಿಯಲ್ಲಿ ಸ್ಥಾಪಿಸಲಾದ ಸ್ಥಳೀಯ ಮಟ್ಟದ ಸಮಿತಿಗಳಿಗೆ ಸಂಬಂಧಿಸಿದ ಮಾಹಿತಿಯ ಪ್ರದರ್ಶನ – ಬುದ್ಧಿ ಮಾಂದ್ಯತೆ ಮತ್ತು ಬಹು ವಿಧ ಅಂಗವೈಕಲ್ಯ ಕಾಯ್ದೆ, 1999**

1) **ಕಾಯ್ದೆಯಲ್ಲಿರುವ (ಮಾನಸಿಕ ಆರೋಗ್ಯ ಕಾಯ್ದೆ) ಸೌಲಭ್ಯಗಳ ಕುರಿತು ಅಗತ್ಯ ವಿವರಗಳು -**

"ನ್ಯಾಷನಲ್ ಟ್ರಸ್ಟ್ ನ ಮೂಲ ಉದ್ದೇಶಗಳು:-

a) ಅಂಗವಿಕಲ ವ್ಯಕ್ತಿಗಳನ್ನು ಅವರು ಇರುವ ಸಮುದಾಯದೊಳಗೆ ಸಾಧ್ಯವಾದಷ್ಟು ಸ್ವತಂತ್ರವಾಗಿ ಮತ್ತು ಸಂಪೂರ್ಣವಾಗಿ ಬದುಕಲು ಸಕ್ರಿಯಗೊಳಿಸಲು ಮತ್ತು ಸಬಲೀಕರಣಗೊಳಿಸಲು;
b) ವಿಕಲಾಂಗ ವ್ಯಕ್ತಿಗಳಿಗೆ ತಮ್ಮ ಸ್ವಂತ ಕುಟುಂಬಗಳಲ್ಲಿ ಸ್ವಾವಲಂಬಿಯಾಗಿ ವಾಸಿಸುವ ಸಲುವಾಗಿ ಬೆಂಬಲವನ್ನು ಒದಗಿಸಲು ಸೌಲಭ್ಯಗಳನ್ನು ಬಲಪಡಿಸಲು;
c) ಅಂಗವಿಕಲ ವ್ಯಕ್ತಿಗಳ ಕುಟುಂಬದಲ್ಲಿನ ಬಿಕ್ಕಟ್ಟಿನ ಅವಧಿಯಲ್ಲಿ ಅಗತ್ಯ ಆಧಾರಿತ ಸೇವೆಗಳನ್ನು ಒದಗಿಸಲು ನೋಂದಾಯಿತ ಸಂಸ್ಥೆಗೆ ಬೆಂಬಲವನ್ನು ವಿಸ್ತರಿಸಲು;
d) ಕುಟುಂಬದ ಬೆಂಬಲವನ್ನು ಹೊಂದಿರದ ವಿಕಲಾಂಗ ವ್ಯಕ್ತಿಗಳ ಸಮಸ್ಯೆಗಳನ್ನು ನಿಭಾಯಿಸಲು;
e) ವಿಕಲಾಂಗ ವ್ಯಕ್ತಿಗಳ ಪೋಷಕರು ಅಥವಾ ಪಾಲಕರ ಮರಣದ ಸಂದರ್ಭದಲ್ಲಿ, ಅಂತಹ ವ್ಯಕ್ತಿಗಳ ಆರೈಕೆ ಮತ್ತು ಆರೋಗ್ಯ  ಕಾಳಜಿ ಕ್ರಮಗಳನ್ನು ಉತ್ತೇಜಿಸಲು;
f) ಅಂತಹ ರಕ್ಷಣೆಯ ಅಗತ್ಯವಿರುವ ವಿಕಲಾಂಗ ವ್ಯಕ್ತಿಗಳಿಗೆ ಪಾಲಕರು ಮತ್ತು ಟ್ರಸ್ಟಿಗಳ ನೇಮಕಾತಿಯ ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸಲು;
g) ಸಮಾನ ಅವಕಾಶಗಳ ಲಭ್ಯತೆಯನ್ನು ಸುಲಭಗೊಳಿಸುವುದು, ಹಕ್ಕುಗಳ ರಕ್ಷಣೆ ಮತ್ತು ವಿಕಲಾಂಗ ವ್ಯಕ್ತಿಗಳ ಸಂಪೂರ್ಣ ಭಾಗವಹಿಸುವಿಕೆ; ಮತ್ತು
h) ಮೇಲೆ ಹೇಳಿದ ವಿಷಯಕ್ಕೆ ಪ್ರಾಸಂಗಿಕವಾದ ಯಾವುದೇ ಇತರ ಕಾರ್ಯವನ್ನು ಮಾಡಲು.

2) "ಮಾನಸಿಕ ಆರೋಗ್ಯ ಕಾಯಿದೆಯಡಿ ಜಿಲ್ಲಾ ನ್ಯಾಯಾಲಯದಿಂದ ಅಥವಾ ಸ್ವಲೀನತೆ, ಸೆರೆಬ್ರಲ್ ಪಾಲ್ಸಿ, ಮಾನಸಿಕ ಕುಂಠಿತ ಮತ್ತು ಬಹುವಿಧ ವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟ್ ಅಧಿನಿಯಮ, 1999ರ ಅಡಿಯಲ್ಲಿ ಸ್ಥಳೀಯ ಮಟ್ಟದ ಸಮಿತಿಗಳು ನೀಡಿದ ಕಾನೂನು ಪಾಲಕತ್ವ ಪ್ರಮಾಣಪತ್ರವು ಅಂಗವೈಕಲ್ಯ/ವಿಕಲಾಂಗ ವ್ಯಕ್ತಿಗಳ ಬ್ಯಾಂಕ್ ಖಾತೆಗಳನ್ನು ತೆರೆಯಲು / ನಿರ್ವಹಿಸಲು ಸ್ವೀಕಾರಾರ್ಹವಾಗಿದೆ.

3) ಸ್ಥಳೀಯ ಮಟ್ಟದ ಸಮಿತಿಗಳ ವಿವರಗಳು ಬ್ರಾಂಚ್ ನೋಟಿಸ್ ಫೋಲ್ಡರ್‌ನಲ್ಲಿ ಲಭ್ಯವಿರುತ್ತವೆ.

ಯಾವುದೇ ಸಹಾಯಕ್ಕಾಗಿ ದಯವಿಟ್ಟು ನಮ್ಮ ಸರ್ವೀಸ್ ಡೆಲಿವರಿ ಅಂಬಾಸಿಡರ್ ನೊಂದಿಗೆ ಸಂಪರ್ಕದಲ್ಲಿರಿ.

ಧನ್ಯವಾದಗಳು

ಆರ್ ಬಿ ಎಲ್ ಬ್ಯಾಂಕ್ ಪರವಾಗಿ

ಶಾಖೆಯ ವ್ಯವಸ್ಥಾಪಕರು